ಕಾವ್ಯ ಒಂದು ಮ್ಯಾಜಿಕ್! ಈ ಮ್ಯಾಜಿಕ್‌ನಿಂದ ನಿರ್ದಿಷ್ಟವಾಗಿ ನಾನೇನನ್ನೂ ಬಯಸುವುದಿಲ್ಲ. ಕೆಲವೊಂದು ಸಲ ಹಲವು ತಿಂಗಳುಗಳ ಕಾಲ ಕಾವ್ಯ ನನ್ನನ್ನಾಗಲಿ, ನಾನು ಕಾವ್ಯವನ್ನಾಗಲಿ ಮಾತನಾಡಿಸುವ ಗೊಡವೆಗೇ ಹೋಗುವುದಿಲ್ಲ. ಆದರೆ, ದೀರ್ಘಕಾಲ ಅಗಲಿರಲಾರದಂತೆ ನಾವು ಒಬ್ಬರನ್ನೊಬ್ಬರು ಮತ್ತೆ ಸೇರಿಕೊಳ್ಳುತ್ತೇವೆ, ಎಂದೂ ದೂರವೇ ಆಗಿಲ್ಲವೆಂಬಂತೆ. ಒಬ್ಬ ಕವಿ ಕವಿತೆಯನ್ನು ಹೆಣೆಯುವಂತೆ ಈ ಜಗತ್ತಿನಲ್ಲಿ ನನ್ನ ಅಸ್ತಿತ್ವದ ರಹಸ್ಯದ ಸಿಕ್ಕನ್ನು ಬಿಡಿಸಲು ನಾನು ಪ್ರಯತ್ನಿಸುತ್ತೇನೆ. ನನ್ನ ಪ್ರಕಾರ ಇದೊಂದು ತನಗಾಗಿ ಗೂಡು ಕಟ್ಟಿಕೊಳ್ಳುವ ಹಕ್ಕಿಯಂತೆ ಶುದ್ಧ ಜೈವಿಕ ಕ್ರಿಯೆ!

**ಫಾತ್ಮಾ ಕ್ರೌಮಾ**
**ಸಂದರ್ಶನ**

**◆ ನಿಮ್ಮ ಬಾಲ್ಯದ ಪರಿಸರ ಮತ್ತು ಕೌಟುಂಬಿಕ ಹಿನ್ನೆಲೆಯನ್ನು ನಮ್ಮ ಓದುಗರೊಂದಿಗೆ ಹಂಚಿಕೊಳ್ಳಿ.**

ನನ್ನ ಬಾಲ್ಯ ಸಂಭ್ರಮ ಮತ್ತು ಸ್ವವಿಮರ್ಶೆಗಳ ಮಿಶ್ರಣ. ಸಡಗರ ಮತ್ತು ಸಂದಿಗ್ಧತೆಗಳೆರಡರ ಛಾಯೆಯು ನನ್ನ ಬಾಲ್ಯದಲ್ಲಿತ್ತು. ನಾನು ಬೆಳೆದದ್ದು Ksour Essef ಎಂಬ ನೀಲ ಪ್ರಶಾಂತ ಆಕಾಶದ ಕಡಲ ತಡಿಯ ನಗರದಲ್ಲಿ. Not me but You ಎಂಬ ನಾಣ್ಣುಡಿಯಂತೆ ಇಲ್ಲಿ ಸಾಮುದಾಯಿಕ ಬಂಧುತ್ವ ಇನ್ನೂ ಗಟ್ಟಿಯಾಗಿದೆ ಮತ್ತು ಇನ್ನೂ ಜೀವಂತವಾಗಿದೆ. ಎಲ್ಲರೂ ಎಲ್ಲರಿಗಾಗಿ ಎಂಬ ಕಾಳಜಿ. ಸಮುದ್ರ, ಪೈನ್ ಕಾಡು, ಆಲಿವ್ ತೋಪುಗಳಂತಹ ಪ್ರಾಕೃತಿಕ ಸೌಂದರ್ಯದಿಂದ ನನ್ನೂರು ಸುತ್ತುವರೆದಿದೆ. ಆಧುನಿಕತೆ ಮತ್ತು ಪರಂಪರೆಗಳೆರಡೂ ಒಂದಕ್ಕೊಂದು ಅನುಭಾವಿಕವಾಗಿ ಹೆಣೆದುಕೊಂಡಿರುವ ಜಗತ್ತಿನಲ್ಲಿ ನಾನು ವಾಸಿಸುತ್ತಿದ್ದೇನೆ. ನನ್ನ ಬಾಲ್ಯವು, ನನ್ನ ಬರವಣಿಗೆಗೆ ಅಂತ್ಯವಿಲ್ಲದ ಸ್ಫೂರ್ತಿ ತುಂಬಿದ ಚಿಲುಮೆ ಎನ್ನಬಹುದು. ಸಂಪ್ರದಾಯಕ್ಕೆ ಹೆಚ್ಚಿನ ಮಹತ್ವ ಕೊಡುವ ಮಡಿವಂತ ಸಮಾಜದ ನಡುವೆಯೇ ನಾನು ಓದಿ ಬರೆಯುವುದನ್ನು ರೂಢಿಸಿಕೊಂಡೆ. ಮತ್ತದರಲ್ಲಿ ಸಾಂತ್ವನವನ್ನು ಕಂಡುಕೊಂಡೆ. ನನ್ನ ತಂದೆ ಜಾನಪದ ಆಶು ಕವಿ, ಮತ್ತವರಿಗೆ ಕಾವ್ಯದ ಮೇಲೆ ಎಲ್ಲಿಲ್ಲದ ಪ್ರೀತಿ. ಆರಂಭದಲ್ಲಿ ಅವರೇ ನನಗೆ ಸಾಹಿತ್ಯದ ರುಚಿ ಹತ್ತಿಸಿದ್ದು. ಅವರ ಖಾಸಗಿ ಸಂಗ್ರಹದ ಹಲವು ಪುಸ್ತಕಗಳನ್ನು ನಾನು ಓದುತ್ತಿದ್ದೆ ಮತ್ತು ಬಾಲ್ಯದಿಂದಲೇ ಅವು ನನ್ನ ವ್ಯಕ್ತಿತ್ವ ರೂಪಿಸಿವೆ ಎನ್ನಬಹುದು. ಪರಂಪರಾನುಗತ ಆಚರಣೆಗಳನ್ನು ಪಾಲಿಸುವ ಮತ್ತು ಅರ್ಥಪೂರ್ಣ ಸಂಪ್ರದಾಯಗಳನ್ನು ಎತ್ತಿಹಿಡಿಯುವ ಈ ಪುಟ್ಟ ಕರಾವಳಿ ನಗರದಲ್ಲಿ, ನನ್ನ ಕಾವ್ಯವು ನನ್ನ ಆರಂಭದ ರಚನಾತ್ಮಕ ವರುಷಗಳ ಪ್ರತಿಧ್ವನಿಯಾಗಿ ಹೊರ ಹೊಮ್ಮಿತು.

ಮೂಲತಃ ನಾನು ಲಾ ಪ್ರೊಫೆಸರ್.